# ಸಂಪಾದಕೀಯ

## ಇಂದಿನ ನಾಗರಿಕತೆ ಹಾಗೂ ವೇದಾಂತದ ದೃಷ್ಟಿಕೋನ

**ನಾಗರಿಕತೆ** ಎಂದರೆ ಏನು ಎಂಬುದೇ ಒಂದು ದೊಡ್ಡ ಪ್ರಶ್ನೆ. ಯಾವ ನಡವಳಿಕೆಯನ್ನು ನಾವು ಸಭ್ಯತನ ಎಂದು ಇಂದು ಗುರುತಿಸುವೆವೋ ಅದು ಕೆಲವು ದಶಕಗಳ ನಂತರ ಅಸಭ್ಯವೆಂದು ಪರಿಗಣಿಸಲ್ಪಡಬಹುದು. ಅಲ್ಲದೇ ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ಅಳತೆಗೋಲುಗಳು ಇರುವುದರಿಂದ ನಿರ್ದಿಷ್ಟವಾಗಿ ನಾಗರಿಕತೆಯನ್ನು ನಿರ್ಣಯಿಸುವುದು ಕಠಿಣವೇ ಆಗುತ್ತದೆ. ಸಮಾಜದಲ್ಲಿನ ಸಮಸ್ಯೆಗಳನ್ನು, ಅವುಗಳ ಸಂಖ್ಯೆ ಅಥವಾ ತೀವ್ರತೆಯನ್ನು ಗುರುತಿಸಿ ಮನುಷ್ಯನು ನಾಗರಿಕನಾಗಿದ್ದಾನೆಂದು ತೀರ್ಮಾನಿಸುವುದೇ? ಅಥವಾ ಮಾನವನ ಜೀವನವನ್ನು ಹೆಚ್ಚು ಸಹಜವೂ, ಸರಳವೂ ಆಗಿಸುವ ಕಲೆ, ತಂತ್ರಜ್ಞಾನವನ್ನು (ಮಾರುಕಟ್ಟೆಯಲ್ಲಿ ಸಿಗುವ ready to use ಸುಲಭ ಸಾಧನಗಳ ಪಟ್ಟಿಯನ್ನು ನೋಡಿ ತೀರ್ಮಾನಿಸದೆ) ನಾಗರಿಕತೆಯ ಕುರುಹು ಎಂದು ಕರೆಯಬಹುದೇ?

ನಾಗರಿಕತೆಯ ಕಡೆಯ ಹಂತವಾದರೂ ಏನು ಎಂಬುದು ಮತ್ತೊಂದು ಮುಖ್ಯ ಪ್ರಶ್ನೆ. ಇಂದಿನ ಸಮಾಜದ ಬೆಳವಣಿಗೆಯಲ್ಲಿ ತಂತ್ರಜ್ಞಾನದ ಯಶಸ್ಸು ಒಂದೆಡೆ ಸ್ಪಷ್ಟವಾಗಿ ಕಂಡುಬರುತ್ತಿದ್ದರೂ, ಮತ್ತೊಂದೆಡೆ ಸಮಸ್ಯೆಗಳ ಮಹಾಪೂರ ವ್ಯಕ್ತಿಯನ್ನು ತಬ್ಬಿಬ್ಬಾಗಿಸುತ್ತಿದೆ. ಎಲ್ಲಿಲ್ಲದ ಸಮಸ್ಯೆಗಳು, ಒತ್ತಡಗಳು ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ಜೀವನಶೈಲಿಯನ್ನು ನಿಯಂತ್ರಿಸುತ್ತಿವೆ. ಅಸಾಧ್ಯವಾದ ಪೈಪೋಟಿ ಹಾಗೂ ಬಿಡುವಿಲ್ಲದ ಆತುರ ಎಲ್ಲರನ್ನೂ ಬಿಗಿಹಿಡಿತದಲ್ಲಿ ಇರಿಸಿಕೊಂಡಿವೆ. ಹೊಸ ಹೊಸ ಸಮಸ್ಯೆಗಳನ್ನು ಮಾನವನೇ ಸೃಷ್ಟಿಸುತ್ತಿದ್ದಾನೆ ಎಂಬುದು ಎಷ್ಟು ಸತ್ಯವೋ, ಆ ಸಮಸ್ಯೆಗಳಿಗೆ ಅವನೇ ಪರಿಹಾರವನ್ನು ಕಂಡುಕೊಳ್ಳಬಲ್ಲ ಎಂಬುದೂ ಅಷ್ಟೇ ಸತ್ಯ. ಹಾಗೆ ಕಂಡುಕೊಳ್ಳುವುದು ಅನಿವಾರ್ಯವೂ ಕೂಡ. ತಾನು ಸೃಷ್ಟಿಸಿದ ಸಮಸ್ಯೆಗಳಿಗೆ ಹೊರಗಿನಿಂದ ಪರಿಹಾರ ಬಯಸುವುದು ಮೂಢತನವೇ ಎಂದು ಹೇಳಬೇಕು.

ವೇದಾಂತದ ದೃಷ್ಟಿಯಂತೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಾಧ್ಯತೆ ಮನುಷ್ಯನಲ್ಲಿಯೇ ಇದೆ. ಬಾಹ್ಯ ಜಗತ್ತನ್ನು ಸುಧಾರಿಸುವ ಪ್ರಕ್ರಿಯೆಯಲ್ಲಿ ಮಾನವನು ದೈಹಿಕ ಶ್ರಮದಿಂದ ಪ್ರಕೃತಿಯ ವಿಕೋಪಗಳಿಗೆ ಪರಿಹಾರ ಕಂಡುಕೊಳ್ಳುತ್ತಾನೆ. ಆದರೆ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಟ್ಟರೂ, ತನ್ನ ಎಲ್ಲ ಬಯಕೆಗಳೂ ತೀರಿದವು ಎಂದು ಮಾತ್ರ ಅವನು ಎಂದೂ ಕಂಡುಕೊಳ್ಳಲಾರ. ಇಂದು ಇದು ಇದ್ದರೆ ನಾಳೆಯ ದಿನ ಮತ್ತೊಂದು ಬೇಕೆಂಬ ಆಸೆ ಅವನನ್ನು ಕಾಡಲಾರಂಭಿಸುತ್ತದೆ. ಇದರೊಂದಿಗೆ ಬೇರೆಯವರ ಜೀವನವನ್ನು ಗಮನಿಸಿ ಅವರಂತೆ ತನಗೂ ಇನ್ನಷ್ಟು ಬೇಕು ಎಂಬ **ಅಸೂಯೆ, ಪೈಪೋಟಿಗಳೂ** ಕಾಡುತ್ತವೆ. ಆದ್ದರಿಂದ ಮನುಷ್ಯನು ತನ್ನ ಮನಸ್ಸಿನ ಅಥವಾ ಒಳ ಜಗತ್ತಿನ ಹಿಡಿತವನ್ನು ಸಾಧಿಸದಿದ್ದರೆ ಅವನು ಎಂದೆಂದಿಗೂ ಅಪೂರ್ಣನೇ ಎಂದು ವೇದಾಂತ ಹೇಳುತ್ತದೆ.

### ಅತೃಪ್ತ ಮನಸ್ಸು ಅಜ್ಞಾನಿ ಮನಸ್ಸಿಗಿಂತ ಹಾನಿಕರ

ಮಾನವನು ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಬಳಸುವ ಸಾಮರ್ಥ್ಯವು ಅವನ ಆಂತರಿಕ ದಿವ್ಯತೆಯ ಅಭಿವ್ಯಕ್ತಿಯೆಂದು ವೇದಾಂತ ತಿಳಿಸುತ್ತದೆ. ಈ ಅಂತರಂಗದ ಶಕ್ತಿಯನ್ನು ಬಳಸಿಕೊಂಡು ತನ್ನ ಜೀವನವನ್ನಷ್ಟೇ ಅಲ್ಲ, ಹೊರಗಿನ ಜಗತ್ತನ್ನೂ ಮಾನವ ಅದೆಷ್ಟು ಸುಂದರವಾಗಿಸಿಕೊಳ್ಳಬಲ್ಲ! ಆದರೆ ಹಾಗೇಕೆ ಆಗಿಲ್ಲ? ಅತೃಪ್ತ ಮನಸ್ಸು ಅಜ್ಞಾನಿ ಮನಸ್ಸಿಗಿಂತ ಹಾನಿಕರ. ಇಂದಿನ ಮಾನವ ಸಮಾಜದ ಎಲ್ಲ ಸಮಸ್ಯೆಗಳಿಗೂ ಅತೃಪ್ತಿಯೇ ಮೂಲಕಾರಣ ಎಂದು ಹೇಳಬಹುದು. ರೋಗಿಯು ಗುಣವಾಗಬೇಕಾದರೆ ಅವನಿಗೆ ತಗುಲಿರುವ ರೋಗದ ಮೂಲಕ್ಕೆ ಸರಿಯಾದ ಔಷಧವನ್ನು ನೀಡಬೇಕೇ ವಿನಃ ಹೊರಗಿನ ಲಕ್ಷಣಗಳನ್ನು ಕಂಡು ತಾತ್ಕಾಲಿಕ ಪರಿಹಾರವನ್ನು ಸೂಚಿಸಿದರೆ ಸಾಲದು. ಅಂತೆಯೇ ಸಮಾಜದಲ್ಲಿನ ಸಮಸ್ಯೆಗಳಿಗೆ ಇಂತಹ ಮಾನವನನ್ನು ಕೇಂದ್ರವಾಗಿರಿಸಿಕೊಂಡ ಸುಧಾರಣೆಗಳು ಆಗಬೇಕು. ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ರಾಜಕಾರಣವಾಗಲಿ ಅಥವಾ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವ ಕೆಲವೇ ಕೆಲವರು ಕೋಟ್ಯಧೀಶರಾಗಲಿ ಕಾನೂನಿನ, ರಾಜನೀತಿಯ ಮೂಲಕ ನಾಗರಿಕತೆಯನ್ನು ಸೃಷ್ಟಿಸಲಾರರು. ಸಮಾಜವೆಂದರೆ ಅದೊಂದು ಸಮಷ್ಟಿ ವ್ಯವಸ್ಥೆ. ಯಾವುದೇ ವ್ಯವಸ್ಥೆ ಎಲ್ಲರಿಗೂ ಒಮ್ಮೆಗೇ ಅನ್ವಯಿಸುವ ಸಾಧ್ಯತೆಯಿಲ್ಲ ಎನ್ನುವುದು ಸತ್ಯ. ಆದರೆ ಬಹುಸಂಖ್ಯಾತರ ಸಮಸ್ಯೆಗಳೇ ಎಲ್ಲ ಕಾರ್ಯಪ್ರಣಾಳಿಯ ಉದ್ದೇಶವಾಗಬೇಕು.

ಪ್ರಕೃತಿಯ ವಿಕೋಪಗಳಿಗೆ, ಪರಿಸರದ ಒತ್ತಡಗಳಿಗೆ ಹಾಗೂ ಸಹಬಾಳ್ವೆಯ ಬದುಕಿಗೆ ಸ್ಪಂದಿಸುವ ಮಾನವನ ಸಹಜವೂ ಸರಳವೂ ಆದ ಬೆಳವಣಿಗೆಯೇ ನಾಗರಿಕತೆ ಎಂದು ಕೆಲವರ ಅಭಿಪ್ರಾಯ. ಮೇಲಿನ ಅಭಿಪ್ರಾಯದೊಂದಿಗೆ, ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳೆಂಬ ಹೆಸರು ಪಟ್ಟಿಯಿರುವ ಆಧುನಿಕ ಸಮಾಜಗಳನ್ನು ಹೋಲಿಸಿ ನೋಡಿದರೆ ಮನುಷ್ಯ ನಾಗರಿಕನಾಗಿದ್ದಾನೆಯೇ ಎಂಬ ಪ್ರಶ್ನೆ ಬರುವುದು ಸಹಜವೇ.

ವೈಜ್ಞಾನಿಕತೆ ಹಾಗೂ ವಿಜ್ಞಾನವು ತಂದುಕೊಟ್ಟಿರುವ

ಸೌಲಭ್ಯಗಳು ನಾಗರಿಕತೆಯ ಕುರುಹಲ್ಲ. ಅವನ್ನು ಸರಿಯಾಗಿ ಬಳಸುವ ಮಾನವನ ಪರಿಪೂರ್ಣ ವಿಕಾಸವೇ ನಿಜವಾದ ನಾಗರಿಕತೆಯ ಲಕ್ಷಣ. ನಾಗರಿಕತೆಯು ಕೇವಲ ವಿಜ್ಞಾನದ ವ್ಯಾಪ್ತಿಯಲ್ಲ. ವಿಜ್ಞಾನದ ಬಳಕೆಯಿಂದ ಮಾನವರ ನಡುವೆ ಹೋರಾಟವೇ ಹೆಚ್ಚಾಗಿದ್ದರೆ ಅದಕ್ಕೆ ಕಾರಣ ಮಾನವನ ಸ್ವಾರ್ಥ ಹಾಗೂ ಅಸೂಯೆಗಳೇ. ಹೊರಗಿನ ಪ್ರಪಂಚದ ಅರಿವು ಜ್ಞಾನದ, ಬುದ್ಧಿಯ ವಿಕಾಸಕ್ಕೆ ಕಾರಣವಾಗುತ್ತದೆ. ಆದರೆ ಅದರ ಜೊತೆಜೊತೆಗೆ ಮಾನವನಲ್ಲಿಯ ಭಾವನಾಸಾಮರ್ಥ್ಯವೂ ವಿಕಸನಗೊಳ್ಳದಿದ್ದರೆ ಎಲ್ಲವನ್ನೂ ತನ್ನ ಸ್ವಾರ್ಥಕ್ಕಾಗಿ ಬಳಸಿ ಕೊಳ್ಳುವ ಲೋಭಿತನ ಮಾನವನನ್ನು ಆಕ್ರಮಿಸಿಕೊಂಡು ಅನಾಗರಿಕ ವರ್ತನೆಯೇ ಅಭಿವ್ಯಕ್ತವಾಗುತ್ತದೆ. ಬಹಳಷ್ಟು ಪ್ರಯತ್ನ ಹಾಗೂ ಹೋರಾಟದಿಂದ ಏನನ್ನೋ ಸಾಧಿಸುವ ಮಾನವನಿಗೆ ತಿಳಿಯಬರುವುದೇನೆಂದರೆ ಆ ಯಶಸ್ಸು ಮತ್ತಷ್ಟು ಹೋರಾಟಕ್ಕೆ ಕಾರಣವಾಗುತ್ತದೆ. ಇದೇ ಮಾನವನ ಮುಂದಿರುವ ವಿಪರ್ಯಾಸ.

ನಾಗರಿಕತೆಯು ಬೆಳೆದಂತೆ ಮಾನವನ ಹೋರಾಟವೂ ಹೆಚ್ಚುತ್ತಾ ಹೋಗುತ್ತದೆ. ಇದಕ್ಕೆ ಎರಡು ಕಾರಣಗಳಿವೆ. ಒಂದು, ಮಾನವನ ಮನಸ್ಸು ಪಕ್ವವಾದಂತೆ, ವಿಕಾಸಗೊಂಡಂತೆ, ಅವನಿಗೆ ತನ್ನಲ್ಲಿ ಹಾಗೂ ಸಮಾಜದಲ್ಲಿ ಇರುವ ನ್ಯೂನತೆಗಳ ಅರಿವುಂಟಾಗಿ ಅವುಗಳನ್ನು ಸರಿಪಡಿಸುವಲ್ಲಿ ಮತ್ತೆ ಹೋರಾಟ, ಪ್ರತಿಭಟನೆ ಪ್ರಾರಂಭವಾಗುತ್ತವೆ. ಇದರಿಂದ ನಾಗರಿಕತೆಯು ಮತ್ತಷ್ಟು ಸಮೃದ್ಧವಾಗುತ್ತದೆ. ಇದೊಂದು ನಿರಂತರವಾಗಿ ನಡೆಯುವ ಪ್ರಕ್ರಿಯೆ. ಎರಡನೆಯದಾಗಿ, ಮಾನವನಲ್ಲಿರುವ ಅತೃಪ್ತಿಯ ಭಾವನೆಯೇ ಅವನನ್ನು ನಿರಂತರವಾಗಿ ಮುಂದು ವರಿಯುವಂತೆ ಪ್ರಚೋದಿಸುತ್ತಿರುತ್ತದೆ. ಒಂದರಲ್ಲಿ ಯಶಸ್ಸು ಕಂಡೊಡನೆಯೇ ಅದಕ್ಕಿಂತ ಮಿಗಿಲಾದ ಮತ್ತೊಂದನ್ನು ಬಯಸುವುದು ಮಾನವನ ಸಹಜಸ್ವಭಾವ. ಇದೇ ಪ್ರವೃತ್ತಿಯು ಸಮಾಜದಲ್ಲೂ ಕಂಡುಬರುತ್ತದೆ. ಬೆಳೆಯುತ್ತಾ ಹೋದಂತೆ ಪ್ರತಿಯೊಂದು ಸಮಾಜವೂ ಹೊಸಹೊಸ ಮೈಲಿಗಲ್ಲುಗಳನ್ನು ದಾಟುತ್ತಾ, ಉತ್ತಮೋತ್ತಮವಾದ ಆದರ್ಶಗಳನ್ನು ಅಳವಡಿಸಿ ಕೊಳ್ಳಲು ಪ್ರಯತ್ನಿಸುತ್ತದೆ.

ಸಮಷ್ಟಿರೂಪದಲ್ಲಿ, ಜೀವನಮಟ್ಟದಲ್ಲಿ ಪ್ರಗತಿಯನ್ನು ಸಾಧಿಸು ವುದು ಮುಂದುವರೆದಂತೆ ಮತ್ತೆ ಮತ್ತೆ ಹೋರಾಟ ನಡೆಯು ವುದು ಕಂಡುಬರುತ್ತದೆ. ಎಲ್ಲ ಪ್ರಗತಿಯೂ ಹೋರಾಟವನ್ನೇ ಅವಲಂಬಿಸಿರುತ್ತದೆ ಎಂದೇ ಹೇಳಬಹುದು. ಕೆಟ್ಟದ್ದನ್ನು, ತುಚ್ಛವಾದ ದ್ದನ್ನು ಬಿಟ್ಟು ಉತ್ತಮವಾದದ್ದನ್ನು ಸಾಧಿಸುವುದೇ ಈ ಹೋರಾಟದ ಗುರಿ. ಸ್ವಾಮಿ ವಿವೇಕಾನಂದರ ಅಭಿಪ್ರಾಯದಂತೆ ಜೀವನವು ಒಂದು ನಿರಂತರ ಹೋರಾಟ. ಮನುಷ್ಯನು ಕೆಳಗಿನ ಸ್ತರದಿಂದ ಮೇಲಿನ ಸ್ತರಕ್ಕೆ ಏರುತ್ತಲೇ ಹೋಗುತ್ತಾನೆ. ನಾವು ಯಾವುದನ್ನು ಕೆಟ್ಟದ್ದು ಎನ್ನುವೆವೋ ಅದು ಕೇವಲ ಕೆಳಗಿನ ಮಟ್ಟವಷ್ಟೆ.

ವೇದಾಂತದಂತೆ ಎಲ್ಲ ಬೆಳವಣಿಗೆಯ ಗುರಿಯೂ ಪರಿ ಪೂರ್ಣತೆಯ ಅಭಿವ್ಯಕ್ತಿ. ಪರಿಪೂರ್ಣತೆಯನ್ನು ಧರ್ಮಗ್ರಂಥ ಗಳಲ್ಲಿ ದೇವರು, ಈಶ್ವರ ಅಥವಾ ಬ್ರಹ್ಮ ಎಂದು ಕರೆಯ ಲಾಗಿದೆ. ಮಾನವನು ದೇವರ ಮಟ್ಟವನ್ನು ಮುಟ್ಟುವವರೆಗೂ ಅವನು ವಿಕಾಸವನ್ನು ಹೊಂದುತ್ತಲೇ ಹೋಗುತ್ತಾನೆ. "ಎಲ್ಲಿಯ ತನಕ ಪ್ರತಿಯೊಬ್ಬ ಮಾನವನೂ ತಾನು ದೇವರೊಂದಿಗೆ ಒಂದು ಎಂದು ತಿಳಿಯುವುದಿಲ್ಲವೋ ಅಲ್ಲಿಯ ತನಕ ನಾನು ಕಾರ್ಯನಿರತನಾಗಿರುತ್ತೇನೆ" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಹಾಗೆ ಹೇಳುವುದರ ಮೂಲಕ ನಮ್ಮ ಗುರಿಯನ್ನು ನಿರ್ದೇಶಿಸಿದ್ದಾರೆ.

ಈ ಸೃಷ್ಟಿಯ ಹಿನ್ನೆಲೆಯಲ್ಲಿರುವ ಶಕ್ತಿಯು ಪರಿಪೂರ್ಣ ವೆಂದು ವೇದಾಂತ ಹೇಳುತ್ತದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಮುನಿ ಹೇಳುತ್ತಾನೆ: **ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ**— "ಸೂರ್ಯಚಂದ್ರರೂ ಸೇರಿದಂತೆ ಈ ಎಲ್ಲ ಸೃಷ್ಟಿಯೂ ನಡೆದು- ಕೊಂಡು ಹೋಗುತ್ತಿರುವುದು ಈ ಅಕ್ಷರ (ಕ್ಷಯವಿಲ್ಲದ, ಬದ ಲಾಗದ, ಶಾಶ್ವತವಾದ) ಬ್ರಹ್ಮನ ನಿಯಮದಂತೆ." ಭಗವದ್ಗೀತೆ ಯಲ್ಲಿ ಶ್ರೀಕೃಷ್ಣನು ತನ್ನ ಈಶ್ವರತ್ವವನ್ನು ಪ್ರಕಟಪಡಿಸುತ್ತ ಹೇಳು ತ್ತಾನೆ: **ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ**— "ನಾನು ಸಮಸ್ತ ಜಗತ್ತಿಗೆ ಉತ್ಪತ್ತಿಸ್ಥಾನ, ನನ್ನಿಂದಲೇ ಎಲ್ಲವೂ ಪ್ರವರ್ತಿಸುತ್ತಿರುವುದು" (ಇರುವುದು, ಅಥವಾ ಜೀವಿಯ ಅಸ್ತಿತ್ವದ ಭಾವನೆಯೇ ದೇವರ ಅಂಶ).

ವೇದಾಂತ ಹೇಳುವಂತೆ ನಮ್ಮ ಮೂಲವೂ ಪರಿಪೂರ್ಣತೆ ಯಾಗಿದ್ದು, ಗುರಿಯೂ ಪರಿಪೂರ್ಣತೆಯಾಗಿದ್ದರೆ, ಈಗಿನ ನಮ್ಮ ಸ್ಥಿತಿಯೂ ಪರಿಪೂರ್ಣತೆಯಾಗಿರಬೇಕು. ಹಾಗಿದ್ದರೆ ನಾವು ಸಾಧಿಸಬೇಕಾದ್ದು ಏನೂ ಇಲ್ಲ ಎನ್ನುವ ಆಕ್ಷೇಪಣೆಗೆ ಉತ್ತರವಿದೆ. ನಾವು ಪರಿಪೂರ್ಣರು ಎಂಬುದನ್ನು ಮರೆತಿದ್ದೇವೆ. ಸುಖ-ದುಃಖಗಳ ದ್ವಂದ್ವಗಳನ್ನು ಅನುಭವಿಸುತ್ತ 'ನಾನು, ನನ್ನದು' ಎಂಬ ಮೋಹದಿಂದ ಬಳಲುತ್ತ ನಮ್ಮನ್ನು ಸಂಕುಚಿತ ಗೊಳಿಸಿಕೊಂಡಿದ್ದೇವೆ. ವಿಸ್ತಾರವಾಗಿ ಹಾಗೂ ಎತ್ತರವಾಗಿ ಬೆಳೆದು ವಿಕಾಸವನ್ನು ಸಾಧಿಸಬೇಕಾಗಿದೆ. 'ಎಲ್ಲವೂ ನಾನೇ', 'ಪರಕೀಯರು ಯಾರೂ ಇಲ್ಲ' ಹಾಗೂ 'ನನ್ನ ಸಣ್ಣತನವನ್ನು ಗೆದ್ದು ವಿಶಾಲವಾಗಿ ಬೆಳೆದಾಗ ಈ ಅನಿತ್ಯವೂ, ಅಸುಖವೂ ಆದ ಜಗತ್ತಿನ ಹಿಡಿತದಿಂದ ಮುಕ್ತನಾಗಬಲ್ಲೆ'—ಇದು ವೇದಾಂತವು ನಮ್ಮ ಮುಂದಿಡುವ ಆದರ್ಶ. ಇದು ಉತ್ತಮ ನಾಗರಿಕ ಲಕ್ಷಣವಾಗಿಯೂ ಪರಿಣಮಿಸುವುದು. **ವಸುಧೈವ ಕುಟುಂಬಕಂ**—ಜಗತ್ತೇ ನನ್ನ ಕುಟುಂಬ ಎನ್ನುವ ಭಾವನೆ ಯನ್ನು ಸಾಧಿಸಲು ಆಧ್ಯಾತ್ಮಿಕ ಮಾರ್ಗವೊಂದೇ ಉಪಾಯ. ಪ್ರಜ್ಞಾವಂತ ನಾಗರಿಕತೆಯು ಇಂದಿನ ಆವಶ್ಯಕತೆ ಎಂದು ವಿಚಾರವಂತರು ಹೇಳುತ್ತಿದ್ದಾರೆ. ತನ್ನ ಜೀವನದ ಬಗ್ಗೆ ಹಾಗೂ

ಸಮಾಜದ ಹಿತದ ಬಗ್ಗೆ ಅರಿವಿರುವ ವ್ಯಕ್ತಿಯೇ ಉತ್ತಮ ನಾಗರಿಕನಾಗಬಲ್ಲ. ಅಂತಹ ವ್ಯಕ್ತಿಗಳು ಎಲ್ಲಿ ಅಧಿಕವಾಗಿರುವರೋ ಅದೇ ಉತ್ತಮ ಸಂಸ್ಕೃತಿ, ಉತ್ತಮ ನಾಗರಿಕತೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಸಮಾಜವು ಬದಲಾಗುತ್ತಿರುವ ಪ್ರಕ್ರಿಯೆಗಳಲ್ಲಿ ಒಂದು ಹಂತ ಅಷ್ಟೇ. ಕಾಲದ ಗತಿಯಲ್ಲಿ ಅದೊಂದು ಘಟನೆ. ಅದೊಂದು ಕೊನೆಗೊಂಡ ಸ್ಥಿತಿಯಲ್ಲ, ಆಗುವಿಕೆಯ ಪ್ರಕ್ರಿಯೆ." ಸಂಸ್ಕೃತಿಯ ಮೂಲಕ ನಾವು ಒಂದು ಸಮಾಜದ ಸ್ಥಿತಿಯನ್ನು ಅಳೆಯುತ್ತೇವೆ. ಅದು ಕೇವಲ ಅದರ ಕವಚ. ವ್ಯಕ್ತಿಯು ಒಳ್ಳೆಯ ಉಡುಪನ್ನು ಧರಿಸಿದಂತೆ ಇದು. ಅವನ ಉಡುಪು ಹಾಗೂ ನುಡಿಯನ್ನು ಕಂಡು ಅವನು ಸುಸಂಸ್ಕೃತನೆಂದು ನಾವು ಕರೆಯುತ್ತೇವೆ. ಆದರೆ ಅವನ ಅಂತಃಸತ್ತ್ವವು ನಿಂತ ನೀರಾಗದೆ ಸದಾ ಬದಲಾವಣೆಯನ್ನು ಹೊಂದುತ್ತಿರುತ್ತದೆ. ಅದು ಪರಿಪೂರ್ಣತೆಯನ್ನು ಮರಳಿ ಪಡೆದುಕೊಳ್ಳುವ ನಿರಂತರ ಪ್ರಯತ್ನ. ಈ ಪ್ರಯತ್ನದ ತೀವ್ರತೆಯೇ ಮನುಷ್ಯನಿಗೆ ಘನತೆ, ತೃಪ್ತಿಗಳನ್ನು ತರುವಂತಹುದು. ಈ ಪ್ರಯತ್ನವಿದ್ದರೆ ಮಾತ್ರ ಅವನನ್ನು ಪ್ರಜ್ಞಾವಂತನೆಂದು ಕರೆಯಬಹುದು. ಇದು ಮಾನವನ ಜೀವನಕ್ಕೆ ಅರ್ಥವನ್ನೂ, ಪುಷ್ಟಿಯನ್ನೂ ನೀಡುತ್ತದೆ. ಸಾವಿರಾರು ವರ್ಷಗಳ ಇತಿಹಾಸದಲ್ಲಿ ಆಗಿಹೋಗಿರುವ ಅನೇಕ ಸುಧಾರಣೆಗಳ, ಬದಲಾವಣೆಗಳ ಮೊತ್ತ ನಮ್ಮ ಇಂದಿನ ಜೀವನ. ಹಿಂದಿನದೆಲ್ಲವೂ ಅರ್ಥಹೀನವೆಂದು ನಾವು ಅಲ್ಲಗಳೆಯುವಂತಿಲ್ಲ. ನಮ್ಮ ಪೂರ್ವಜರು ವಿಜ್ಞಾನವನ್ನು ತಿಳಿದಿರಲಿಲ್ಲ, ತಂತ್ರಜ್ಞಾನವನ್ನು ಬಳಸಲಿಲ್ಲವಾದ್ದರಿಂದ ಅವರೆಲ್ಲ ಅನಾಗರಿಕರಾಗಿದ್ದರೆಂದು ಹೇಳಲಾಗದು. ಅವರ ಬೌದ್ಧಿಕ ಪ್ರಯತ್ನಗಳ ಫಲವಾಗಿ ನಮ್ಮ ಜೀವನಗಳಲ್ಲಿ ಇಂದು ಬೆಳಕಿದೆ. ಈ ವಿಕಾಸ, ಬೆಳವಣಿಗೆಯು ಯಾವಾಗಲೂ ಮುಂದುವರಿಯಬೇಕು. ಸಮುದ್ರದ ಅಲೆಯು ಬೆಳೆಯುತ್ತಲೇ ಹೋಗುವುದು. ಸಮಾಜದಲ್ಲಿ ಕಂಡುಬರುವ ಉತ್ತಮ ನಡತೆ, ಆಚಾರಗಳು ಬದಲಾಗುತ್ತ ಮತ್ತೂ ಉದಾತ್ತಗೊಳ್ಳುತ್ತ ಮಾನವನನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವುವು. ಇದು ವೇದಾಂತದ ಸತ್ಯವನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಂಡಾಗ ನಮಗೆ ದೊರೆಯುವ ಫಲ. ಇದರಿಂದ ಅಂತರಂಗ ಹಾಗೂ ಬಹಿರಂಗ—ಎರಡೂ ಕ್ಷೇತ್ರಗಳಲ್ಲಿ ಉತ್ತಮಿಕೆ ಸಿದ್ಧಿಸುತ್ತದೆ.

ಕೆಲವರ ಅಭಿಮತದಂತೆ ಪ್ರಕೃತಿಯ ನಿಯಮಗಳನ್ನು ಅನುಸರಿಸುತ್ತ, ಅದರ ದಾಸನಾಗಿದ್ದು ಆದಿಮಾನವನಂತೆ ಜೀವಿಸುವುದೇ ನಾಗರಿಕತೆ! ಎಲ್ಲ ಸಾಮಾಜಿಕ ಬದಲಾವಣೆಗಳೂ ಮನುಷ್ಯನ ಮೇಲೆ ಒತ್ತಡವನ್ನು ತಂದಿವೆ, ಇವೆಲ್ಲ ಅನವಶ್ಯಕ ಎಂಬುದೇ ಇವರ ವಾದ. ವೇದಾಂತದ ಪ್ರಕಾರ ಮನುಷ್ಯನು ಪ್ರಕೃತಿಯ ಮೇಲೆ ಹತೋಟಿಯನ್ನು ಸಾಧಿಸಿದಾಗ ಮಾತ್ರ ಅವನು ನಿಜವಾಗಿಯೂ ಮುಕ್ತನಾಗುವುದು. ಆಧುನಿಕ ಸಂಶೋಧನೆ, ತಂತ್ರಜ್ಞಾನಗಳನ್ನೂ ಬಳಸಿಕೊಂಡು ಮಾನವ ಮತ್ತಷ್ಟು ಸ್ವತಂತ್ರನಾಗಬೇಕು. ತನ್ನಲ್ಲಿನ ಅಜ್ಞಾನವನ್ನು ಹೋಗಲಾಡಿಸಿಕೊಂಡು ಎಲ್ಲ ಭಯದಿಂದಲೂ ಮುಕ್ತನಾಗಬೇಕು. ಇದು ನಾಗರಿಕತೆಯ ಚರಮ ಲಕ್ಷಣ. ಮಾನವನ ಬೆಳವಣಿಗೆಯೇ ಎಲ್ಲ ಪರಿವರ್ತನೆಯ ಗುರಿ ಎಂದು ವೇದಾಂತ ಹೇಳುತ್ತದೆ—**ನ ಮನುಷ್ಯಾತ್ ಶ್ರೇಷ್ಠತರಂ ಹಿ ಕಿಂಚಿತ್** "ಮನುಷ್ಯನಿಗಿಂತ ಶ್ರೇಷ್ಠವಾದದ್ದು ಮತ್ತೊಂದಿಲ್ಲ."

ಆರ್ಥಿಕ ವ್ಯವಸ್ಥೆ ಹಾಗೂ ಪದಾರ್ಥ ಸಂಸ್ಕೃತಿಯೇ ಶ್ರೇಷ್ಠವೆಂದು ಪ್ರತಿಪಾದಿಸುವ ಭೌತವಾದವನ್ನು ಅವಲಂಬಿಸಿರುವ ಸಮಾಜಗಳಲ್ಲಿ ಮನುಷ್ಯತ್ವ ಕಡೆಗಣಿಸಲ್ಪಡುತ್ತದೆ. ಮೇಲಿನ ಎರಡರೊಂದಿಗೆ ಆಕ್ರಮಣಕಾರಿ ಭಾವನೆಗಳೂ ಸೇರಿಕೊಂಡರೆ ಏನೆಲ್ಲ ಅನಾಹುತಗಳು ಆಗಬಹುದೆಂದು ಬೇರೆಯಾಗಿ ಹೇಳಬೇಕಿಲ್ಲ. ಯುದ್ಧಗಳನ್ನು ಮಾಡಿ, ಇತರ ಸಮಾಜಗಳ ಆರ್ಥಿಕ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಶಕ್ತಿಗಳು ಬಲವಾದರೆ, ಅವು ಭೀತಿಯನ್ನು ಹುಟ್ಟಿಸಿ ವಿಪುಲವಾದ ಶಸ್ತ್ರಾಸ್ತ್ರಗಳ ಮಾರುಕಟ್ಟೆಯನ್ನು ಸೃಷ್ಟಿಸಿ, ಮನುಷ್ಯರ ನಡುವೆ ಪರಸ್ಪರ ದ್ವೇಷ ಅಸೂಯೆಗಳೇ ಹೆಚ್ಚಾಗುತ್ತವೆ.

ಇಂತಹ ಮನೋಭಾವನೆಯವರನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅಸುರರೆಂದು ಕರೆಯುತ್ತಾನೆ: **ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ । ಈಶ್ವರೋ ಅಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ॥**—"ಈ ಶತ್ರುವು ನನ್ನಿಂದ ಕೊಲ್ಲಲ್ಪಟ್ಟನು, ಇತರ ಶತ್ರುಗಳನ್ನೂ ಕೊಲ್ಲುವೆನು. ನಾನು ಈಶ್ವರ, ಭೋಗಿ, ಬಲವಂತ, ಸುಖಿ ಹಾಗೂ ಯಶಸ್ವಿಯಾಗಿರುವವನು." ಇದಕ್ಕೆ ವಿರುದ್ಧವಾದ ದೈವೀಸಂಪತ್ತುಳ್ಳ ಮಾನವನಲ್ಲಿ ಅಭಯ, ಸಾತ್ತ್ವಿಕ ಭಾವ, ದಾನ, ದಮ, ಸರಳತೆ, ಅಹಿಂಸೆ, ಸತ್ಯ, ಅಕ್ರೋಧ, ಶಾಂತಿ, ಕ್ಷಮೆ, ಧೈರ್ಯಗಳಂತಹ ಗುಣಗಳಿರುತ್ತವೆ. ಆದ್ದರಿಂದ ವೇದಾಂತದ ಪ್ರಕಾರ ನಾಗರಿಕತೆಯು ಮನುಷ್ಯನನ್ನು ಉತ್ತಮನನ್ನಾಗಿಸಬೇಕು ಹಾಗೂ ಸಮಾಜವೂ ಉತ್ತಮವಾಗಿರಬೇಕೆಂಬ ತ್ಯಾಗಯುತ ಜವಾಬ್ದಾರಿಯನ್ನು ಅವನಲ್ಲಿ ತರಬೇಕು. ಹೀಗಾದಾಗ ಮಾತ್ರ ಪರಸ್ಪರ ಸಹಾಯ ಮಾಡುತ್ತ ಎಲ್ಲರೂ ಮುಂದುವರೆಯುವ ಶ್ರೇಯಸ್ಸಿನ ಪಥ ನಮ್ಮದಾಗುವುದು. ನಮ್ಮ ನಮ್ಮ ಆಚರಣೆಗಳಲ್ಲಿ, ಧರ್ಮಗಳಲ್ಲಿ ಹಾಗೂ ಚಿಂತನೆಗಳಲ್ಲಿರುವ ಭಿನ್ನತೆಯನ್ನು ಗುರುತಿಸುವ ಧೈರ್ಯವಿರಬೇಕು. ಆದರೆ ಅದರೊಂದಿಗೆ, ಆಧ್ಯಾತ್ಮಿಕ ದೃಷ್ಟಿಯುಳ್ಳ ಪ್ರೀತಿಯಿಂದ ಮಾತ್ರ ಗ್ರಹಿಸಲು ಸಾಧ್ಯವಾಗುವ ಅಂತರಂಗದ ಐಕ್ಯತೆಯನ್ನು ಮನಗಾಣಬೇಕು. ನಾವೆಲ್ಲ ಬೇರೆ ಬೇರೆ ಪಥಗಳ ಮೂಲಕ ಒಂದೇ ಗುರಿಯತ್ತ ಸಾಗುತ್ತಿರುವ ಪಥಿಕರು ಎಂಬ ಸತ್ಯವೂ ನಮ್ಮಿಂದ ದೂರವಾಗಬಾರದು. ಆಗ **ವಿಶ್ವಂ ಭವತಿ ಏಕನೀಡಂ**—ಈ ಇಡೀ ವಿಶ್ವವೇ ಒಂದು ನಿವಾಸವೆಂಬ ವೇದಾಂತದ ನಾಗರಿಕತೆ ಸಾಧ್ಯವಾಗುವುದು.